3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

ಬೆಂಗಳೂರು ನಗರ.

ಸಿಸಿ. 5703/2017

| | |
|---|---|
| ಸಾಕ್ಷಿದಾರರ ಹೆಸರು | ಟಿ. ಸತೀಶಚಂದ್ರ |
| ತಂದೆಯ ಹೆಸರು | ಲೇಟ್. ಎನ್.ಟಿ.ನಾಯಕ |
| ವಯಸ್ಸು | 67 ವರ್ಷ |
| ಉದ್ಯೋಗ | ನಿವೃತ್ತ ಸಿನೀಯರ್ ಮ್ಯಾನೇಜರ್, ಇಂಡಿಯನ್ ಬ್ಯಾಂಕ್. |
| ವಾಸ | ಬದ್ರಪ್ಪ ಲೇಔಟ್, ಬೆಂಗಳೂರು. |
| ಪ್ರಮಾಣೀಕರಿಸಿದ ದಿನಾಂಕ | 02/12/2023 |

ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :

ಜುನ್ 2015 ರಿಂದ ಡಿಸೆಂಬರ್ 2016 ರವರೆಗೆ ಇಂಡಿಯಾನ್ ಬ್ಯಾಂಕ್, ಎಸ್.ಎಮ್.ಇ. ಶಾಖೆ ಪೀಣ್ಯ , ಬೆಂಗಳೂರು ಇಲ್ಲಿ ಸಿನೀಯರ್ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದೇನೆ. ದೂರುದಾರರ ಸರ್ಕಾರಿ ಪದವಿ ಪೂರ್ವ ಕಾಲೇಜು, ಪೀಣ್ಯ , ಬೆಂಗಳೂರಿನ ಮತ್ತು ಪ್ರೌಢ ಶಾಲೆಗೆ ಸಂಬಂಧಪಟ್ಟಂತೆ ಒಟ್ಟು 4 ಖಾತೆಗಳು ನಮ್ಮ ಬ್ಯಾಂಕ್ ನಲ್ಲಿ ಇದ್ದವು. ಅವುಗಳ ಪೈಕಿ ಎರಡು ಖಾತೆಗಳಿಗೆ ಸಂಬಂಧಪಟ್ಟಂತೆ ತೊಂದರೆ ಯಾಗಿರುತ್ತದೆ. ಒಂದು ಬ್ಯಾಂಕ್ ಖಾತೆ ಸಂಖ್ಯೆ.404133465 ಇದು ಕಾಲೇಜಿಗೆ ಸಂಬಂಧಪಟ್ಟ ಖಾತೆಯಾಗಿರುತ್ತದೆ. ಇನ್ನೊಂದು ಬ್ಯಾಂಕ್ ಖಾತೆ ಸಂಖ್ಯೆ. 404131923 ಇದು ಪ್ರೌಢ ಶಾಲೆಗೆ ಸಂಬಂಧಪಟ್ಟಿರುತ್ತದೆ. ಕಾಲೇಜಿನ ಪ್ರಾಂಶುಪಾಲರ ಸಹಿ ಇದ್ದರೇ ಮಾತ್ರ ಹಣ ತೆಗೆಯಲು ಬರುತ್ತದೆ. ಪ್ರೌಢ ಶಾಲೆಯ ಖಾತೆಗೆ ಉಪಪ್ರಾಂಶುಪಾಲರ ಸಹಿ ಇದ್ದರೇ ಮಾತ್ರ ಹಣ ತೆಗೆಯಲು ಬರುತ್ತದೆ. ಹೈಸ್ಕೂಲ್ ನವರು ಚೆಕ್ ಬುಕ್ ಗಾಗಿ ಮನವಿ ಕೊಟ್ಟಿದ್ದರು. ಅದನ್ನು ತಪ್ಪಾಗಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್,ಕೆ. ರಾಮು ರವರು ಪಡೆದುಕೊಂಡಿದ್ದರು.

ಅವರು ಸದರಿ ಖಾತೆಯಿಂದ ರೂ.1,12,052/- ನ್ನು ಪ್ರೌಢ ಶಾಲಾ ಖಾತೆಯಿಂದ ತೆಗೆದುಕೊಂಡಿರುತ್ತಾರೆ. ಅವರಿಗೆ ಸದರಿ ಚೆಕ್ ಗಳಿಗೆ ಸಹಿ ಮಾಡುವ ಅಧಿಕಾರ ಇರಲಿಲ್ಲ. ನಾನು ರೂ,60,000/- ಮೊತ್ತದ ಚೆಕ್ ನಂಬರ್ 672917 ನೆದನ್ನು ದಿನಾಂಕ 20/01/2016 ರಂದು ಮಂಜೂರು ಮಾಡಿದ್ದೇನೆ. ರೂ,40,000/- ಮೊತ್ತದ ಚೆಕ್ ನಂಬರ್ 672919 ನೆದನ್ನು ಬೇರೆಯವರು ಪಾಸ್ ಮಾಡಿರುತ್ತಾರೆ. ರೂ. 8,741/- ಮತ್ತು ರೂ, 3,311/- ಮೊತ್ತದ ಚೆಕ್ ಗಳನ್ನು ಬಿಸ್ಕಾಂ ಗೆ ನೀಡಲಾಗಿರುತ್ತದೆ, ಅವುಗಳು ಸಹ ಪಾಸ್ ಆಗಿರುತ್ತವೆ.

2. 1 ನೇ ಆರೋಪಿ ಡಾ. ಎನ್,ಕೆ. ರಾಮು ರವರು ಫೋರ್ಜರಿ ಮಾಡಿ, ಅವರ ಚೆಕ್ ಇಲ್ಲದೇ ಇದ್ದರೂ ಸಹ ಪ್ರೌಢ ಶಾಲೆಯ ಚೆಕ್ ಗೆ ಫೋರ್ಜರಿ ಸಹಿ ಮಾಡಿ ಮೋಸ ಮಾಡಿ ಹಣ ಪಡೆದುಕೊಂಡಿರುತ್ತಾರೆ. ಈ ವಿಷಯವನ್ನು ಕಾಲೇಜಿನವರು ತಿಳಿಸಿರುತ್ತಾರೆ. ಈ ವಿಷಯವನ್ನು ಪೊಲೀಸರಿಗೆ ತಿಳಿಸಿದ್ದೇನೆ. ನಾವು ನಂತರ ಕಾಲೇಜಿನ ಅಕೌಂಟ ನಿಂದ ಪ್ರೌಢ ಶಾಲೆಯ ಅಕೌಂಟಿಗೆ ಹಣ ವರ್ಗಾವಣೆ ಮಾಡಿರುತ್ತೇವೆ. ಆಗ ಕಾಲೇಜಿನವರು ಈ ದೂರನ್ನು ನೀಡಿರುತ್ತಾರೆ. ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ. ಎಮ್,ಎಸ್.ಪಿ. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ಪುನಃ ದಿನಾಂಕ 10/01/2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು : ಆರೋಪಿ ಪರ ಶ್ರೀ. ಕೆ.ಎಲ್. ವಕೀಲರಿಂದಃ**

3. ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳ ಖಾತೆಗಳು ಇದ್ದಾಗ ಅವುಗಳ ಪ್ರಾಚಾರ್ಯರು ವರ್ಗಾವಣೆಯಾದಾಗ ಮಾದರಿ ಸಹಿ ಪಡೆದು ಅವುಗಳನ್ನು ನಮೂದು ಮಾಡುವುದು ನಮ್ಮ ಕರ್ತವ್ಯ ಆಗಿರುತ್ತದೆ ಎನ್ನುವುದು ಸರಿ. ಯಾವುದೇ ಚೆಕ್ ಗಳು ಬಂದಾಗ ಆ ಚೆಕ್ ಗಳ ಸಹಿ ಯನ್ನು ಪರಿಶೀಲನೆ ಮಾಡಿ ಚೆಕ್ ಪಾಸ್ ಮಾಡುವ ಪ್ರಮೇಯ ಇರುತ್ತದೆ ಎನ್ನುವುದು ಸರಿ. The Government Pre-Univercity College, Peenya ಎಂದು ಚೆಕ್ ಗಳಲ್ಲಿ ಸಹಿ ಇರುವ ಜಾಗದಲ್ಲಿ ಪ್ರಿಂಟ್ ಮಾಡಿ ಬ್ಯಾಂಕ್ ನವರು ಕಳುಹಿಸಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಪ್ರಾಂಶುಪಾಲರು ವರ್ಗಾವಣೆಯಾದಾಗ ಖಾತೆ ನಂಬರ ಬದಲಾಗುವುದಿಲ್ಲ ಎನ್ನುವುದು ಸರಿ.

4. ನಮ್ಮ ಬ್ಯಾಂಕ್ ನವರು ಈ 4 ಚೆಕ್ ಗಳು ಪಾಸ್ ಗಾಗಿ ಬಂದಾಗ ಸಹಿಯನ್ನು ಪರಿಶೀಲನೆ ಮಾಡಿಲ್ಲ ಎಂದರೆ ಮಾಡಿರುತ್ತಾರೆ, ಆದರೆ ಸದರಿ ಶಾಲೆಯ ಚೆಕ್ ತಪ್ಪಾಗಿ ಕಾಲೇಜಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಪೊಲೀಸರು ಈ ಚೆಕ್ ಗಳಿಗೆ ಸಂಬಂಧಪಟ್ಟಂತೆ ಯಾರು authorized signatory ಇದ್ದರು ಎಂದು ಕೇಳಿ ಪಡೆದುಕೊಂಡಿಲ್ಲ ಎಂದರೆ ಸರಿ.ಈ ಚೆಕ್ ಗಳಲ್ಲಿ ಹೈಸ್ಕೂಲ್ ಪೀಣ್ಯ ಎಂದು ಇರುವುದಿಲ್ಲ ಎಂದರೆ ಖಾತೆ ಸಂಖ್ಯೆ ಹೈಸ್ಕೂಲ್ ನವರದ್ದು ಇರುತ್ತದೆ. ಚೆಕ್ ಗಳ ಮೇಲೆ ಇರುವ ಸಹಿಗೂ ಮತ್ತು ಸದರಿ ಖಾತೆಯ authorized signatory ಸಹಿಗೂ ವ್ಯತ್ಯಾಸ ಇರುತ್ತದೆ ಎನ್ನುವುದು ಸರಿ. ಸಹಿ ವ್ಯತ್ಯಾಸವಾದ ಕಾರಣ ಅದನ್ನು ಮರಳಿಸಬಹುದಾಗಿತ್ತು ಎಂದರೆ ಸರಿ. ಆ ರೀತಿ ನಮ್ಮ ಬ್ಯಾಂಕ್ ನವರು ಚೆಕ್ ಗಳನ್ನು ಮರಳಿಸಿಲ್ಲ ಎಂದರೆ ಸರಿ. ಚೆಕ್ ಗಳ ಮೇಲೆ ತಪ್ಪಾಗಿ ಕಾಲೇಜಿನ ಹೆಸರು ಪ್ರಿಂಟ್ ಮಾಡಿ ಕಳುಹಿಸಿರುತ್ತಾರೆ ಎನ್ನುವುದು ಸರಿ.

5. ಚೆಕ್ ಮೇಲೆ The Government Pre-Univercity College, Peenya ಎಂದು ಬಂದಿದ್ದರಿಂದ ಆರೋಪಿ ತಮ್ಮದೆ ಎಂದು ತಿಳಿದುಕೊಂಡು ಚೆಕ್ ಮೇಲೆ ಸಹಿ ಮಾಡಿ

ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಖಾತೆ ಸಂಖ್ಯೆ ಹೈಸ್ಕೂಲ್ ನವರದ್ದು ಇರುತ್ತದೆ, ಅದು ಪ್ರಾಚಾರ್ಯರ ಗಮನಕ್ಕೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯ ಗೊತ್ತಾದ ನಂತರ ಆರೋಪಿ ನಮಗೆ ಮೌಖಿಕವಾಗಿ ಕಾಲೇಜು ಖಾತೆಯಿಂದ ಹಣ ತೆಗೆಯಲು ಹೇಳಿದ್ದರಿಂದ ಹಣವನ್ನು ಕಾಲೇಜು ಖಾತೆಯಿಂದ ಹೈಸ್ಕೂಲ್ ಖಾತೆಗೆ ವರ್ಗಾವಣೆ ಮಾಡಿದ್ದೇನೆ ಎಂದರೆ ಹೈಸ್ಕೂಲ್ ನವರು ಕೊಟ್ಟ ಅರ್ಜಿಯ ಮೇರೆಗೆ ಮಾಡಿದ್ದೇನೆ. ಆರೋಪಿ ಹೇಳಿದ್ದಾನೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ.

6. ಕಾಲೇಜಿನ ಎರಡು ಖಾತೆಗಳಿಂದ ಖಾಯಂ ಆಗಿ ವ್ಯವಹಾರ ಇತ್ತು ಎಂದರೆ ಇರಬಹುದು. ಈ ಎಲ್ಲ ತಪ್ಪು ನಮ್ಮ ಬ್ಯಾಂಕ್ ನವರು ಮಾಡಿರುತ್ತಾರೆ, ಆರೋಪಿಯ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಬ್ಯಾಂಕ್ ನವರು ತಪ್ಪಾಗಿ ಕಾಲೇಜಿನವರಿಗೆ ಚೆಕ್ ಕೊಟ್ಟಿರುತ್ತಾರೆ, ಕಾಲೇಜಿನವರು ಖಾತೆ ಸಂಖ್ಯೆಯನ್ನು ಪರಿಶೀಲನೆ ಮಾಡಬೇಕಾಗಿತ್ತು, ಮಾಡಿರುವುದಿಲ್ಲ. ನಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**